# GOVERNMENT OF KARNATAKA
## KARNATAKA STATE PRE-UNIVERSITY EDUCATION EXAMINATION BOARD
### II YEAR PUC EXAMINATION MAR-2013
## SCHEME OF VALUATION

Subject Code : 25 Subject : ಕರ್ನಾಟಕ ಸಂಗೀತ

| Qn. No. | | Marks |
|---|---|---|
| I ಅ] | ಈ ಕೆಳಗೆ ಬಿಟ್ಟಿರುವ ಜಾಗವನ್ನು ಭರ್ತಿ ಮಾಡಿ: | |
| 1. | ಅನುದ್ರುತ | 1 |
| 2. | ಜಯ ಚಾಮರಾಜೇಂದ್ರ ಒಡೆಯರು | 1 |
| 3. | ವಿಕೃತಿ | 1 |
| 4. | ಭಾಷಾಂಗ | 1 |
| 5 | ಅಕ್ಕ ಮಹಾದೇವಿ | 1 |
| ಆ] | ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ: | |
| 1. | ವಚನ — 12ನೇ ಶತಮಾನ | 1 |
| 2. | 65ನೇ ಮೇಳ — ಮೇಚಕಲ್ಯಾಣಿ | 1 |
| 3. | ಶಾಸ್ತ್ರ — ಮೇಳ ಶಾಸ್ತ್ರಜ್ಞ | 1 |
| 4. | ಸಂಕೀರ್ಣ — 9 ಅಕ್ಷರಗಳು | 1 |
| 5. | ಔಡವರಾಗ — 5 ಸ್ವರಗಳು. | |

| Qn. No. | | Marks |
|---|---|---|
| II | ಈ ಕೆಳಕಂಡ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ: | 5x1=5 |
| 1. | ಶ್ರುತಿಗಳು ಒಟ್ಟು 22. | 1 |
| 2. | ಮುತ್ತಯ್ಯ ಭಾಗವತರ ಅಂಕಿತ ಹರಿಕೇಶ | 1 |
| 3. | ಸಪ್ತಸ್ವರಗಳ ಕ್ರಮವಾದ ಇಳಿಯುವಿಕೆಗೆ ಅವರೋಹಣ ಎಂದು ಹೆಸರು. | 1 |
| 4. | ಮಲಹರಿ ಮತ್ತು ಮೋಹನ ರಾಗಗಳು - - ಜನ್ಯರಾಗಗಳು. | 1 |
| 5. | ಶ್ರೀ ಪುರಂದರ ದಾಸರು, ಪಿಳ್ಳಾರಿ ಗೀತೆಗಳ ರಚನಕಾರರು. | 1 |
| III | ಈ ಕೆಳಗಿನ ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ: | |
| 1. | ವಾದಿ ಸ್ವರ :- ಒಂದು ರಾಗದಲ್ಲಿ ಪ್ರಧಾನವಾಗಿರುವ ಸ್ವರಕ್ಕೆ "ವಾದಿ" ಎಂದು ಹೆಸರು. ಈ ಸ್ವರವು ಒಂದು ರಾಗದಲ್ಲಿ ಆಗಾಗ್ಗೆ ಸಂಚಾರದಲ್ಲಿ ಬರುತ್ತದೆ. ಈ ಸ್ವರವನ್ನು ರಾಜನಿಗೆ ಹೋಲಿಸಲಾಗಿದೆ. ಒಂದು ರಾಗದಲ್ಲಿ ಒಂದಕ್ಕಿಂತ ಹೆಚ್ಚಿನ ವಾದಿ ಸ್ವರಗಳಿರಬಹುದಾಗಿದೆ. | 2½ |

| Qn. No. | | Marks |
|---|---|---|
| 2) | ಸಂವಾದಿ : ಒಂದು ರಾಗದಲ್ಲಿ ಪರಸ್ಪರ ಎರಡು ಸ್ವರಗಳಲ್ಲಿ ಒಂದು ವಾದಿ ಸ್ವರ ಎನಿಸಿದರೆ, ಮತ್ತೊಂದು ಸ್ವರವು ಸಂವಾದಿ ಎನಿಸುತ್ತದೆ. ಈ ಎರಡು ಸ್ವರಗಳಿಗೆ ಪರಸ್ಪರ ನಾಲ್ಕು ಅಥವಾ ಆರು ಸ್ವರಗಳ ಅಂತರವಿರುತ್ತದೆ.[ಅಂದರೆ ಎಂಟು ಅಥವಾ ಹನ್ನೆರಡು ಶ್ರುತಿಗಳ ಅಂತರ]. ಸಾಮಾನ್ಯವಾಗಿ ಈ ಸ್ವರಗಳ ಅಂತರವನ್ನು ಷಡ್ಜ ಮಧ್ಯಮ ಭಾವ ಮತ್ತು ಷಡ್ಜ ಪಂಚಮ ಭಾವಗಳಿಂದ ಗುರುತಿಸಲಾಗಿದೆ. ಈ ಸ್ವರವನ್ನು ಮಂತ್ರಿಗೆ ಹೋಲಿಸಲಾಗಿದೆ. ಈ ವಾದಿ ಸಂವಾದಿ ಸ್ವರಗಳು ಏಕಕಾಲದಲ್ಲಿ ನುಡಿದಾಗ ಮಧುರವಾಗಿರುತ್ತದೆ. | 2½ |
| 3. | ವಿವಾದಿ ಸ್ವರ:- ಪರಸ್ಪರ ಎರಡು ಸ್ವರಗಳಲ್ಲಿ ಒಂದು ವಾದಿಯೆನಿಸಿದರೆ ಮತ್ತೊಂದು ವಿವಾದಿ ಎನಿಸುತ್ತದೆ. ಅವುಗಳ ಅಂತರವು ಒಂದು ಸ್ವರ ಅಥವಾ ಒಂದು ಶ್ರುತಿ ಮಾತ್ರ ಇರುತ್ತದೆ. ಈ ಸ್ವರಗಳ ಏಕಕಾಲದಲ್ಲಿ ನುಡಿದಾಗ ಅಹಿತವಾಗಿರುತ್ತದೆ. ಈ ಸ್ವರವನ್ನು ಶತ್ರುವಿಗೆ ಹೋಲಿಸಲಾಗಿದೆ. ಉದಾ:- ಷಡ್ಜ ಮತ್ತು ಶುದ್ಧ ಋಷಭ, ಶುದ್ಧ ಋಷಭ ಮತ್ತು ಶುದ್ಧ ಗಾಂಧಾರ ಮುಂತಾದವು. | 2½ |

| Qn. No. | | Marks |
|---|---|---|
| IV | ಈ ಕೆಳಗಿನ ಯಾವುದಾದರೂ ಎರಡಕ್ಕೆ ರಾಗ ಲಕ್ಷಣವನ್ನು ಬರೆಯಿರಿ : | |
| 1. | ಚಕ್ರವಾಕ: ಈ ರಾಗವು 16ನೇ ಮೇಳಕರ್ತ ರಾಗ. ದೀಕ್ಷಿತರ ಗಜಾನನಯುತಂ, ತ್ಯಾಗರಾಜರ ಸುಗುಣಮುಲೆ ಈ ರಾಗದ ಪ್ರಸಿದ್ಧ ಕೃತಿಗಳು.<br>ಆ॥ ಸರಿಗಮಪಧನಿಸ॥<br>॥ ಸನಿಧಪಮಗರಿಸ॥<br>ಬರುವ ಸ್ವರಗಳು:- ಷಡ್ಜ, ಶುದ್ಧ ರಿಷಭ, ಅಂತರ ಗಾಂಧಾರ, ಶುದ್ಧ ಮಧ್ಯಮ, ಪಂಚಮ, ಚತುಶ್ರುತಿ ಧೈವತ ಮತ್ತು ಕೈಶಿಕಿ ನಿಷಾಧ.<br>ಪ್ರಸಿದ್ಧ ರಚನೆಗಳು:- ಲಕ್ಷ್ಮಣಗೀತೆ, ಎಟುಲ ಬ್ರೋತುವೊ ತೆಲಿಯ, ಗಜಾನನಯುತಂ ಸುಗುಣಮುಲೇ ಇತ್ಯಾದಿಗಳು. | 2½ |
| 2. | ಪಂತುವರಾಳಿ:- 51ನೇ ಮೇಳಕರ್ತ ರಾಗ. ಪ್ರತಿಮಧ್ಯಮ ರಾಗಗಳಲ್ಲಿ ಸುಪ್ರಸಿದ್ಧ ರಾಗ., ರಾಗಾಂಗ ರಾಗ.<br>ಆ॥ ಸರಿಗಮಪಧನಿಸ॥<br>ಅ॥ ಸನಿಧಪಮಗರಿಸ॥<br>ಬರುವ ಸ್ವರಗಳು:- ಷಡ್ಜ, ಶುದ್ಧ ರಿಷಭ, ಅಂತರ ಗಾಂಧಾರ, ಪ್ರತಿಮಧ್ಯಮ, ಪಂಚಮ, ಶುದ್ಧ ಧೈವತ, ಕಾಕಲಿ ನಿಷಾಧಗಳು.<br>ಪ್ರಸಿದ್ಧ ರಚನೆಗಳು:- ನಾರದಮುನಿ, ವಾಚಾಂ | 2½ |

| Qn. No. | | Marks |
|---|---|---|
| | ಅಪರಾಮ ಭಕ್ತಿ, ಸಾರಸಾಕ್ಷ, ಶಂಭೋ ಮಹಾದೇವ ಮುಂತಾದವು. | |
| 3. | ಖರಹರಪ್ರಿಯ :- ಈ ರಾಗವು 22 ನೇ ಮೇಳಕರ್ತ ರಾಗಾಂಗ ರಾಗ. ಖರಹರಪ್ರಿಯ ರಾಗವು ಶ್ರೀ ರಾಮನಿಗೆ ಬಹಳ ಪ್ರಿಯವಾದ ರಾಗ. | 2½ |
| | ಆ:- ॥ ಸ ರಿ ಗ ಮ ಪ ದ ನಿ ಸ ॥ | |
| | ॥ ಸ ನಿ ದ ಪ ಮ ಗ ರಿ ಸ ॥ | |
| | ಬರುವ ಸ್ವರಗಳು:- ಷಡ್ಜ, ಚತುಶ್ರುತಿ ಋಷಭ, ಸಾಧಾರಣ ಗಾಂಧಾರ, ಶುದ್ಧ ಮಧ್ಯಮ, ಪಂಚಮ, ಚತುಶ್ರುತಿ ಧೈವತ ಮತ್ತು ಕೈಶಿಕಿ ನಿಷಾದ. | |
| | ಪ್ರಸಿದ್ಧ ರಚನೆಗಳು:- ಪಾಹಿ ರಾಮ, ಮಿತ್ರಿ ಭಾಗ್ಯಮೆ, ರಾಮ ನೀ ಸಮಾನ, ಪಕ್ಕಲ ನಿಲಬಡಿ ಇತ್ಯಾದಿಗಳು. | |
| | P.T.O | |

| Qn. No. | | Marks |
|---|---|---|
| V | ಸುಳಾದಿ ಸಪ್ತತಾಳಗಳಲ್ಲಿ ಚತುರಶ್ರ ಜಾತಿ ಏಕತಾಳವನ್ನು ಮೂರು ಕಾಲಗಳಲ್ಲಿ ಬರೆಯಿರಿ. | 7 |
| | ಮೊದಲನೇ ಕಾಲ | |
| | ‖ ಸರಿಗಮ ‖ ರಿಗಮಪ ‖ | 2 |
| | ‖ ಗಮಪದ ‖ ಮಪದನಿ ‖ | |
| | ‖ ಪದನಿಸ ‖ ಸನಿದಪ ‖ | |
| | ‖ ನಿದಪಮ ‖ ದಪಮಗ ‖ | |
| | ‖ ಪಮಗರಿ ‖ ಮಗರಿಸ ‖ | |
| | ಎರಡನೇ ಕಾಲ | |
| | ‖ ಸರಿಗಮ ರಿಗಮಪ ‖ ಗಮಪದ ಮಪದನಿ ‖ | 2 |
| | ‖ ಪದನಿಸ ಸನಿದಪ ‖ ನಿದಪಮ ದಪಮಗ ‖ | |
| | ‖ ಪಮಗರಿ ಮಗರಿಸ ‖ | |
| | ಮೂರನೇ ಕಾಲ | |
| | ‖ ಸರಿಗಮ ರಿಗಮಪ ಗಮಪದ ಮಪದನಿ ‖ | 3 |
| | ‖ ಪದನಿಸ ಸನಿದಪ ನಿದಪಮ ದಪಮಗ ‖ | |
| | ‖ ಪಮಗರಿ ಮಗರಿಸ ಸರಿಗಮ ರಿಗಮಪ ‖ | |
| | ‖ ಗಮಪದ ಮಪದನಿ ಪದನಿಸ ಸನಿದಪ ‖ | |
| | ‖ ನಿದಪಮ ದಪಮಗ ಪಮಗರಿ ಮಗರಿಸ ‖ | |

| Qn No. | | Marks |
|---|---|---|
| VI | ಶ್ರೀ ಕನಕ ದಾಸರು : [ಕಾಲ ಸುಮಾರು 1486-1580] | 4+4=8 |

"ತಲ್ಲಣಿಸದಿರು ಕಂಡ್ಯ ತಾಳು ಮನವೆ,
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ"
ಎಂದು ಬಹಳ ರಮ್ಯವಾಗಿ ಭಗವಂತನ ಅಸ್ತಿತ್ವವನ್ನು ತಲ್ಲಣಿಸುವ ಭಕ್ತ ಕೋಟಿಗೆ ಸಾರಿ ಸಮಾಧಾನವನ್ನು ನೀಡಿದ್ದಾರೆ, ಕನಕದಾಸರು. ಪರಮಾತ್ಮನ ಸಾನ್ನಿಧ್ಯವನ್ನು ಪಡೆಯಲು ಮೇಲು ಕೀಳೆಂಬ ಭೇದವಿಲ್ಲವೆಂಬುದಾಗಿ ತಮ್ಮ ಉನ್ನತ ಜೀವನದ ಮೂಲಕ ಜನತೆಗೆ ತೋರಿಸಿಕೊಟ್ಟಿದ್ದಾರೆ.

ತಂದೆ ಬೀರಪ್ಪ ಮತ್ತು ತಾಯಿ ಬಚ್ಚಮ್ಮ, ಮಗುವಿಗೆ ಚಿಕ್ಕಂದಿನಿಂದಲೇ ಎಲ್ಲಾ ತರಹದ ವಿದ್ಯೆಗಳನ್ನು ಕಲಿಸಿದ್ದರು. ಇವರು ಹೊಲದಲ್ಲಿ ಕೆಲಸ ನಡೆಯುತ್ತಿದ್ದಾಗ ಇವರ ಜಮೀನಿನಲ್ಲಿ ಬಹುವಾಗಿ ಸಂಪತ್ತು ದೊರಕಿದ ಕಾರಣ ಇವರಿಗೆ ಕನಕನಾಯಕನೆಂದು ಹೆಸರು ಇತ್ತು. ಜೀವನದಲ್ಲಿ ರಕ್ತಪಾತ, ಮೇಲು ಕೀಳೆಂಬ ಭಾವನೆಗಳು ಇವರ ಮನಸ್ಸಿನ ಮೇಲೆ ಬಹಳವಾಗಿ ಪರಿಣಾಮ ಬೀರಿ, ಇವರು ತಮ್ಮ ಸಂಸಾರ, ಮನೆ, ಮಠ ಎಲ್ಲವನ್ನು ತ್ಯಾಗಮಾಡಿ ಮನೆಯಿಂದ ಹೊರಬಂದರು. ವ್ಯಾಸರಾಯರಲ್ಲಿ ಶಿಷ್ಯರಾದರು.

| Qn No | | Marks |
|---|---|---|

ಉಡುಪಿಯಲ್ಲಿ ಕೃಷ್ಣನ ಸೇವೆ ಮಾಡಿ
ಭಗವದ್ಭಕ್ತರಾಗಿ ಶ್ರೀಕೃಷ್ಣನ ದರ್ಶನವನ್ನು
ಪಡೆದ ಮಹಾಪುರುಷರು. ನಂತರ
ಕಾಗಿನೆಲೆಯಲ್ಲಿ ಬಂದು ನೆಲೆಸಿ ಅನೇಕ
ಕೀರ್ತನೆಗಳನ್ನು, ಮುಂಡಿಗೆಗಳನ್ನು
"ಕಾಗಿನೆಲೆ ಆದಿ ಕೇಶವ, ಆದಿ ಕೇಶವ,
ಬಾಡದಾದಿ ಕೇಶವ, ನೆಲೆ ಆದಿ ಕೇಶವ"
ಎಂಬ ಅಂಕಿತದಲ್ಲಿ ರಚನೆಗಳನ್ನು
ಭವ್ಯವಾಗಿ ರಚಿಸಿದರು.

"ಧರೆಯ ಭೋಗವನ್ನು ನಂಬಿ
ಹರಿಯ ಮರೆತು ಕೆಡಲಿ ಬೇಡ, ಧರೆಯ
ಭೋಗ ಕನಸಿನಂತೆ ಕೇಳು ಮಾನವ" ಎಂದು
ಐಹಿಕ ಸುಖದ ಅಶಾಶ್ವತೆಯನ್ನು ಹೇಳಿದ್ದಾರೆ.
"ಏನೂ ಇಲ್ಲದ ಎರಡು ದಿನದ ಜ್ಞಾನದಲ್ಲಿ
ದಾನಧರ್ಮವ ಮಾಡಿರಯ್ಯ" ಎಂದು ವೈರಾಗ್ಯ
ಮತ್ತು ಪರೋಪಕಾರ ಬುದ್ಧಿಯನ್ನು
ಉಪದೇಶಿಸುತ್ತಾರೆ. ಜಪವ ಮಾಡಿದರೇನು
ತಪವ ಮಾಡಿದರೇನು ಕಪಟ ಗುಣ ವಿಪರೀತವಿದ್ದರೆ
ಎಂದು ಬಾಹ್ಯಾಚರಣೆಗಳಿಗಿಂತ ಗುಣ ಮುಖ್ಯವೆನ್ನುತ್ತಾರೆ.
"ಕುಲಕುಲ ಕುಲವೆಂದು ಹೊಡೆದಾಡದಿರಿ,
ಕುಲಕುಲವೆನ್ನುತಿಹರು ಕುಲ ಯಾವುದು ಸತ್ಯ
ಸುಖವುಳ್ಳ ಜನರಿಗೆ" ಎಂದು ಕೀಳು ಮೇಲೆಂಬ
ಭಾವನೆಯನ್ನು ಖಂಡಿಸುತ್ತಾರೆ.

ಕನಕದಾಸರು ಕೀರ್ತನೆಗಳನ್ನಲ್ಲದೆ,
ನಳಚರಿತ್ರೆ, ಹರಿಭಕ್ತಿಸಾರ, ಮೋಹನ ತರಂಗಿಣಿ,

| Qn. No | | Marks |
|---|---|---|
| | ರಾಮಧಾನ್ಯ ಚರಿತೆ ಎಂಬ ಕಾವ್ಯಗಳನ್ನು | |
| | ತೊಂಬತ್ತೆರಡು ಸಾಂಗತ್ಯಗಳಿಂದ ಕೂಡಿದ | |
| | ನೃಸಿಂಹಸ್ತವ ಎಂಬ ಸ್ತೋತ್ರವನ್ನು ರಚಿಸಿದ್ದಾರೆ. | |
| | ಉಪನಿಷತ್ತು, ಪುರಾಣ, ಇತಿಹಾಸಗಳ ಸ್ತೋತ್ರವನ್ನು | |
| | ಉಪನಿಷತ್ತು, ಪುರಾಣ. | |
| | ರಚಿಸಿದ್ದಾರೆ. ಇತಿಹಾಸಗಳ ಮರ್ಮವನ್ನು | |
| | ಅರಿತವರು ಮಾತ್ರವೇ ಅರ್ಥ ಮಾಡಿಕೊಳ್ಳಬಲ್ಲ | |
| | ತತ್ವದ ಬೆಡಗುಗಳಿಂದ ಕೂಡಿದ 'ಕನಕನ- | |
| | ಮುಂಡಿಗೆ" ಎಂಬ ವಿಶಿಷ್ಟ ರೀತಿಯ ಕೀರ್ತನೆ- | |
| | ಗಳು ದಾಸಕೂಟದವರಲ್ಲಿ ಬಳಕೆಯ | |
| | ಹಾಡುಗಳಾಗಿ ಪ್ರಸಿದ್ಧಿಯಲ್ಲಿವೆ. | |